ದಿಃ 13.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಸದರಿ ದಾವೆಯನ್ನು ಹನುಮಂತಪ್ಪ ರವರ ಮೇಲೆ ಹಾಕಿದ್ದು ನಂತರ ಅವರು ಮೃತ ಪಟ್ಟ ನಂತರ ಪ್ರತಿವಾದಿಗಳ ಮೇಲೆ ಸಲ್ಲಿಸಿದ್ದೇನೆ. ಪ್ರತಿವಾದಿಯರು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರಿಂದ ದಾಖಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತು ಪ್ರಮಾಣಪತ್ರದಲ್ಲಿ ಬರೆದ ವಿಷಯ ಎಂದರೆ ಸ್ವತ್ತು ಹನುಮಂತಪ್ಪ ರವರ ಹೆಸರಿಗೆ ನೊಂದಣಿ ಆಗಿರುವುದಿಲ್ಲ ಚಲಪತಿಯವರ ಹೆಸರಿಗೆ ನೊಂದಣಿ ಆಗಿರುತ್ತದೆ. ನಾನು ಈ ನ್ಯಾಯಾಲಯದಲ್ಲಿ 3 ಪ್ರಕರಣ ದಾಖಲಿಸಿದ್ದೇನೆ.

**2.** ಆ 3 ಮೂರು ಪ್ರಕರಣದಲ್ಲಿ ನಾನು ವಾದಿ ಇರುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಹೇಗೆ ಸಾಕ್ಷಿ ನೀಡಬೇಕೆಂದು ನನಗೆ ಗೊತ್ತು ಎಂದರೆ ಸರಿ. ದಾವೆಯ ಸರ್ವೇ ನಂ. 17/1 ಇರುತ್ತದೆ. ಸರ್ವೇ ನಂ. 17/1 ಒಟ್ಟು ವಿಸ್ತೀರ್ಣ 4 ಎಕರೆ 10 1/2 ಗುಂಟೆ ಇರುತ್ತದೆ. ಸದರಿ ಸ್ವತ್ತು ಮೊದಲು ನಮ್ಮ ತಾತ ಕೊನಪ್ಪರವರಿಗೆ ಸೇರಿತ್ತು. ಕೊನಪ್ಪರವರಿಗೆ 3 ಜನ ಗಂಡು ಮಕ್ಕಳು. ಸದರಿ ಸ್ವತ್ತನ್ನು 3 ಜನ ಮಕ್ಕಳು 3 ಭಾಗ ಮಾಡಿಕೊಂಡಿದ್ದಾರೆ. ರಾಮಕೃಷ್ಣರವರಿಗೆ 1 ಎಕರೆ 18 ½ ಗುಂಟೆ, ಕೃಷ್ಣಪ್ಪರವರಿಗೆ 1 ಎಕರೆ 3 ಗುಂಟೆ. ನಮ್ಮ ತಂದೆ ತೀರಿಕೊಂಡ ಮೇಲೆ ನಾವು 3 ಜನ ಅಣ್ಣ ತಮ್ಮಂದಿರು ಆಸ್ತಿಯನ್ನು ಅಂಚಿಕೊಂಡಿದ್ದೇವೆ.

**3**. ಸದರಿ ಆಸ್ತಿಗಳನ್ನು 2004-05 ರಲ್ಲಿ ಮೇಲ್ಕಂಡಂತೆ ಭಾಗ ಮಾಡಿಕೊಂಡಿದ್ದೇವೆ. ತಾಲ್ಲೂಕು ಕಛೇರಿಯಲ್ಲಿ ನೊಂದಾಯಿತ ವಲ್ಲದ ಪಾಲು ಪಟ್ಟಿ ಮಾಡಿಕೊಂಡಿದ್ದೇವೆ. ದಿನಾಂಕ ಗೊತ್ತಿಲ್ಲ. 1 ಎಕರೆ 18 ಗುಂಟೆ ಜಮೀನು ರಾಮಕೃಷ್ಣ ಪಾಲಿಗೆ ಬಂದಿರುತ್ತದೆ ಅದರ ಚಕ್ಕುಬಂದಿ ಪೂಃಕ್ಕೆ ಪರಶುರಾಮಯ್ಯ ರವರ ಸ್ವತ್ತು, ಪಃಕ್ಕೆ ವೆಂಕಟರಮಣಪ್ಪ ರವರ ಸ್ವತ್ತು, ದಃಕ್ಕೆ ಕೆ. ಎಚ್ . ನಾಗಾರಾಜ್ ರವರ ಸ್ವತ್ತು, ಉಃಕ್ಕೆ

ಮಂಜುನಾಥರವರ ಸ್ವತ್ತು. ಸದರಿ ಸರ್ವೇ ನಂ ನಲ್ಲಿ ಕೃಷ್ಣಪ್ಪರವರಿಗೆ 2 ತಾಕು ಜಮೀನು ಬಂದಿರುತ್ತದೆ. ಅದರ ಚಕ್ಕುಬಂದಿ ಪೂಃಕ್ಕೆ ವೆಂಕಟೇಶಪ್ಪರವರ ಸ್ವತ್ತು, ಪಃಕ್ಕೆ ರಾಮಕೃಷ್ಣ ರವರ ಸ್ವತ್ತು, ಉಃಕ್ಕೆ ನಂಜುಂಡಪ್ಪ ರವರ ಸ್ವತ್ತು, ದಃಕ್ಕೆ ರಾಮಕೃಷ್ಣ ರವರ ಸ್ವತ್ತು. ಇದರ ವಿಸ್ತೀರ್ಣ 27 ಗುಂಟೆ ಇರುತ್ತದೆ. 2 ನೇ ತಾಕಿನ ವಿಸ್ತೀರ್ಣ 22 ಗುಂಟೆ, ಚೆಕ್ಕುಬಂದಿ ಪೂಃಕ್ಕೆ ಸಂಜಿವಪ್ಪರವರ ಸ್ವತ್ತು, ಪಃಕ್ಕೆ ಎಲ್ ಕೃಷ್ಣಪ್ಪ ರವರ ಸ್ವತ್ತು, ಉಃಕ್ಕೆ ನಂಜುಡಪ್ಪರವರ ಸ್ವತ್ತು, ದಃಕ್ಕೆ ರಾಮಕೃಷ್ಣ ರವರ ಸ್ವತ್ತು.

4. ನನ್ನ ತಂದೆ ಹನುಮಂತಪ್ಪರವರಿಗೆ ಬಂದ ಸ್ವತ್ತು 1 ಎಕರೆ 18 ½ ಗುಂಟೆ ಅದರ ಚೆಕ್ಕುಬಂದಿ ಪೂಃಕ್ಕೆ ಪೂನಪ್ಪ ರವರ ಮಗ ರಾಮಕೃಷ್ಣ ರವರ ಸ್ವತ್ತು, ಪಃಕ್ಕೆ ಎಸ್ ರಾಮಯ್ಯ ರವರ ಸ್ವತ್ತು, ಉಃಕ್ಕೆ ರಾಮಕೃಷ್ಣಪ್ಪ ರವರ ಸ್ವತ್ತು, ದಃಕ್ಕೆ ಚಲಪತಿ ಮತ್ತು ಜಯಮೂರ್ತಪ್ಪ ರವರ ಮನೆ (ಈಗ ಹಾಲಿ).

5. ವಿಭಾಗ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ನನ್ನ ತಂದಗೆ ಬಂದ ಸ್ವತ್ತನ್ನು ನಾವು ಹಂಚಿಕೊಂಡಿದ್ದೇವೆ. ನಾವು 3 ಜನ ಅಣ್ಣ ತಮ್ಮಂದಿರು. ಕೆ ಎಚ್ ವೆಂಕಟೇಶ್, ವಾದಿ ಆದ ನಾನು ನಾಗಾರಾಜ್ , ಕೆ. ಎಚ್ ಸುಬ್ರಮಣ್ಯ. ನನ್ನ ಅಕ್ಕ ಲಕ್ಷ್ಮೀದೇವಮ್ಮ ಸಹ ಇರುತ್ತಾರೆ. 1 ಎಕರೆ 18 ಗುಂಟೆ ಪೈಕಿ ವೆಂಕಟೇಶಪ್ಪನಿಗೆ 22 ಗುಂಟೆ ಬಂದಿರುತ್ತದೆ ಅದು 2 ತಾಕು ಇರುತ್ತದೆ. 1 ನೇ ತಾಕು 22 ಗುಂಟೆ ಇರುತ್ತದೆ. ಅದರ ಚೆಕ್ಕುಬಂದಿ ಪೂಃಕ್ಕೆ ಸಂಜಿವಪ್ಪ ರವರ ಸ್ವತ್ತು, ಪಃಕ್ಕೆ ಕೃಷ್ಣಪ್ಪ ರವರ ಖಾಲಿ ಸ್ವತ್ತು, ಉಃಕ್ಕೆ ನಂಜುಡಪ್ಪ ರವರ ಖಾಲಿ ಸ್ವತ್ತು, ದಃಕ್ಕೆ ಕೊನಪ್ಪ ನ ಮಗ ರಾಮಕೃಷ್ಣ ನ ಖಾಲಿ ಸ್ವತ್ತು. 2 ನೇ ತಾಕಿನ ಚೆಕ್ಕುಬಂದಿ ಪೂಃಕ್ಕೆ ರಾಮಕೃಷ್ಣ ರವರ ಸ್ವತ್ತು, ಪಃಕ್ಕೆ ಬೆಸ್ತ ರಾಮಯ್ಯ ರವರ ಖಾಲಿ ಸ್ವತ್ತು, ಉಃಕ್ಕೆ ರಾಮಕೃಷ್ಣಪ್ಪ ರವರ ಖಾಲಿ ಸ್ವತ್ತು, ದಃಕ್ಕೆ ಚಲಪತ್ತಪ್ಪ ಮತ್ತು ಜಯಮೂರ್ತಪ್ಪ ರವರ ಸ್ವತ್ತು. ಸಾಕ್ಷಿ ಮುಂದುವರೆದ ನನ್ನ ಅಣ್ಣ ವೆಂಕಟೇಶಪ್ಪನಿಗೆ ಬಂದಿದೆ ಎಂದು ಮೇಲೆ ಹೇಳಿದ ಸ್ವತ್ತು ನನ್ನ ಭಾಗಕ್ಕೆ ಬಂದಿರುತ್ತದೆ.

6. ಸುಬ್ರಮಣ್ಯ ರವರಿಗೆ 2 ತಾಕು ಜಮೀನು ಬಂದಿರುತ್ತದೆ. 2 ನೇ ತಾಕಿನ ಚೆಕ್ಕುಬಂದಿ ಗೊತ್ತಿದೆ ಎಂದರೆ ಸದರಿ ಸ್ವತ್ತಿನ ಸುತ್ತ ಮನೆಗಳನ್ನು ಕಟ್ಟಿರುತ್ತಾರೆ. 11 ಮನೆಗಳನ್ನು ಕಟ್ಟಿರುತ್ತಾರೆ ಆದ್ದರಿಂದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ವಿಭಾಗ ಪತ್ರ ನೊಂದಣಿ ಮಾಡಿಸಲು ತೊಂದರೆ ಇರಲಿಲ್ಲ. ಅರ್ಧ ಗುಂಟೆ ಗೆ ಸಂಬಂದಿಸಿದಂತೆ ನಾನು ದಾವಾ ದಾಖಲಿಸಿದ್ದೇನೆ. ಒಟ್ಟು 23 ಗುಂಟೆ ನನ್ನ ಭಾಗಕ್ಕೆ ಬಂದಿರುತ್ತದೆ. 23 ಗುಂಟೆ ಪೈಕಿ 5 ½ ಗುಂಟೆಯನ್ನು ಮಾರಾಟ ಮಾಡಿದ್ದೇನೆ. ಆ 5 ½ ಗುಂಟೆ ಜಮೀನಿನಲ್ಲಿ ಈಗ ಮನೆಗಳಿವೆ. ದಾವಾ ಸ್ವತ್ತನ್ನು ಸರ್ವೇ ಮಾಡಿಸಿದ್ದೀರ ಎಂದರೆ ಸರ್ವೇ ಮಾಡಿಸಿ ವಿಭಾಗ ಮಾಡಿಕೊಂಡಿರುತ್ತೇನೆ. ಸರ್ವೇ ಸ್ಕೆಚ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿಲ್ಲ. ನನ್ನ 23 ಗುಂಟೆ ಜಮೀನು ಪಹಣಿಯಲ್ಲಿ ಪ್ರತ್ಯೇಕವಾಗಿ ನಮೂದಾಗಿರುತ್ತದೆ ಈ ಬಗ್ಗೆ ಪಹಣಿ ಹಾಜರುಪಡಿಸಿದ್ದೇನೆ.

7. ದಾವಾ ಸ್ವತ್ತಿನ ಪೈಕಿ 17 ½ ಗುಂಟೆ ಜಮೀನು ಖಾಲಿ ಜಾಗ. ಸರ್ವೇ ನಂ. 17/1 ರಲ್ಲಿ ನನ್ನ ಜಮೀನು ದಕ್ಷಿಣದ ಕಡೆ ಬರುತ್ತದೆ. 17 ½ ಗುಂಟೆ ಜಮೀನಿಗೆ ಚೆಕ್ಕುಬಂದಿ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ ಎಂದರೆ ಪಹಣಿ ಮುಟೇಶನ್ ಹಾಜರುಪಡಿಸಿದ್ದೇನೆ. 17 ½ ಗುಂಟೆ ಜಮೀನನ್ನು ಯಾರಿಗೂ ಮಾರಾಟ ಮಾಡಿಲ್ಲ. ಮೇಲೆ ಹೇಳಿದ ವಿಷಯಗಳನ್ನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ನನ್ನ ಭಾಗಕ್ಕೆ ಬಂದ ಜಮೀನಿಗೆ ಸಂಬಂಧಿಸಿದಂತೆ ಉಲ್ಲೇಖಿಸಿರುತ್ತೇನೆ. 1 ನೇ ಪ್ರತಿವಾದಿಯ ಗಂಡನನ್ನು ನಾನು ನೋಡಿದ್ದೇನೆ. ದಿಃ 03.01.1972 ರಲ್ಲಿ 1 ನೇ ಪ್ರತಿವಾದಿ ಗಂಡನಿಗೆ ನಮ್ಮ ತಂದೆ ದಾವಾ ಸ್ವತ್ತಿನಲ್ಲಿ ಅರ್ಧ ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಲಪತಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಲಪತಿ ರವರು ನಾಗಮ್ಮಗಾರಿ ಹನುಮಂತಪ್ಪರವರ ಸ್ವಂತ ಅಣ್ಣ (1 ನೇ ಪ್ರತಿವಾದಿಯ ಗಂಡನ ಅಣ್ಣ).

8. ಅರ್ಧ ಗುಂಟೆ ಸ್ವತ್ತಿಗೆ ಕ್ರಯ ಪತ್ರದ ಪೂರ್ವದಲ್ಲಿ ಹನುಮಂತಪ್ಪ ರವರ ಸ್ವತ್ತು ಇದ್ದು, ಈಗ ಹಾಲಿ ಚಲಪತಿಯವರ ಸ್ವತ್ತು ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಮೊದಲು ಹನುಮಂತಪ್ಪ ರವರ ಸ್ವತ್ತು ಇದ್ದು ಈಗ 16 ಅಡಿ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ಮೊದಲು ಹನುಮಂತಪ್ಪ ರವರ ಸ್ವತ್ತು ಇದ್ದು ಈಗ ಪಾರ್ವತಿಯವರ ಸ್ವತ್ತು ಇದೆ ಎಂದರೆ ಸರಿ. ಪಾರ್ವತಿ ರವರು ಈಗ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಪಶ್ಚಿಮಕ್ಕೆ ಮೊದಲು ಸರ್ಕಾರಿ ಸ್ವತ್ತು ಈಗ ಬಾಗೇಪಲ್ಲಿ ಚಿಂತಾಮಣಿ ರಸ್ತೆ ಎಂದರೆ ಸರಿ. ಮೇಲೆ ಹೇಳಿದ ಅರ್ಧ ಗುಂಟೆ ಸ್ವತ್ತಿನಲ್ಲಿ ನಮ್ಮ ಸ್ವಾಧೀನದಲ್ಲಿದೆ. ಅರ್ಧ ಗುಂಟೆ ಜಮೀನಿನ ಸ್ವಾಧೀನ ತೋರಿಸಲು ದಾಖಲೆ ಸಲ್ಲಿಸಿದ್ದೀರ ಎಂದರೆ ಅದು 23 ಗುಂಟೆ ಯ ಒಂದು ಭಾಗ.

9. ನಾಗಮ್ಮ ಗಾರಿ ಹನುಮಂತಪ್ಪ ಅಲಿಯಸ್ ಹನುಮಂತಪ್ಪ ರವರ ತಂದೆಯ ಹೆಸರು ವೆಂಕಟರವಣಪ್ಪ ಇರುತ್ತದೆ ಎಂದರೆ ಸರಿ. ನನಗೆ ಓದಲು ಬರುತ್ತದೆ. ನಿಪಿ 4 ರಲ್ಲಿ ಕಲಂ ನಂ. 9 ರಲ್ಲಿ ಇರುವ ಹನುಮಂತಪ್ಪ ಎಂಬ ಹೆಸರು 1 ನೇ ಪ್ರತಿವಾದಿಯ ಗಂಡನ ಹೆಸರು ಎಂದರೆ ನಿಜ ಸಾಕ್ಷಿ ಮುಂದುವರೆದು ದಾಖಲೆ ಸೃಷ್ಟಿ ಮಾಡಿದ್ದಾರೆ. 17 ½ ಗುಂಟೆ ಜಮೀನಿನಲ್ಲಿ ನಿವೇಶನಗಳನ್ನು ಮಾಡಿಲ್ಲ ಅದು ಖಾಲಿ ಜಾಗ ಇರುತ್ತದೆ. 17 ½ ಗುಂಟೆ ಜಮೀನಿನ ಚಕ್ಕುಬಂದಿ ಪೂಃಕ್ಕೆ ಎಸ್ ಎಲ್ ಎಂ ಕಲ್ಯಾಣ ಮಂಟಪ, ಪಃಕ್ಕೆ ಎಸ್ ರಾಮಯ್ಯ ನ ಸ್ವತ್ತು, ಉಃಕ್ಕೆ ರಾಮಕೃಷ್ಣ ಪ್ಪ ರ ಸ್ವತ್ತು ದಃಕ್ಕೆ ನಾಗಾಭೂಷಣ ಮತ್ತು ಜಯಮ್ಮ ರವರ ಸ್ವತ್ತು. ಅಣ್ಣ ತಮಂದಿರು ಸ್ವತ್ತನ್ನು ಭಾಗ ಮಾಡಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹನುಮಂತಪ್ಪರವರ ವಿರುದ್ಧ ಸಲ್ಲಿಸಿದ್ದೇನೆ. ನನ್ನ ಮತ್ತು ಪ್ರತಿವಾದಿಯ ನಡುವೆ ದಾವಾ ಸ್ವತ್ತಿನ ವಿಷಯಕ್ಕೆ ಗಲಾಟೆ ಆಗಿರುವುದಿಲ್ಲ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ, ಸಮಯಾವಕಾಶ ನೀಡಲಾಯಿತು.**

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

**ಓ ಹೇ ಕೇ ಸ ಇದೆ**

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ